ನ್ಯಾರಿ ಮಾಡು, ಆ ಮ್ಯಾಲ ಉಣ್ಣೂವಂತಿ' ಎಂದು ನನ್ನ ಪೂರ್ಣ ಕಾರ್ಯಕ್ರಮವನ್ನು ತಾನೇ ನಿರ್ಧರಿಸಿಬಿಟ್ಟಳು.

'ತಂಗೆವ್ವ ಕಾಣವಳ್ಳು...' ಅಂದೆ.

'ಅಕಿ ಮುಂಜೇಲೆ ಹ್ವಾದಾಕಿ ಇಡೀ ದಿನ ಹೊಲದಾಗ ಇರತಾಳು. ಇನ್ನ ಹೊತ್ತು ಮುಣಗೂ ಹೊತ್ತಿಗೇ ಬರತಾಳು. ಅಳಿಯಾ ಆಳು ಕರಕೊಂಡು ಕಣಾ ಮಾಡ್ಲಾಕತ್ತ್ಯಾನು. ಎತ್ತಗೋಳನೂ ಅಲ್ಲೇ ಕಟ್ಟಿರತಾರು.' ಅಂದಳು. ತಂಗಿಯ ಗಂಡನೂ ನಮ್ಮ ಮನೆಯಲ್ಲೇ ಇದ್ದು, ನಮ್ಮ ಹೊಲ ಮನೆ ನೋಡಿಕೊಳ್ಳುತ್ತಿದ್ದ. ನಮಗೆ ಅದೇ ಸಮಾಧಾನ.

'ಇಡೀ ದಿನ ಮನ್ಯಾಗ ಒಬ್ಬಾಕೀ ಇರತೀಯಲ್ಲ ಬೇ...' ಅಂದೆ.

'ಅದೆಷ್ಟ ದಿನಾ ಬಿಡಪ್ಪಾ? ಕಣಾ ಹಬ್ಬ ಆತಂದರ ಕಾಳು ಹೇರಿಕೊಂಡು ಬಂದ ಬಿಡತಾರು' ಎಂದು ನನಗೇ ಸಮಾಧಾನ ಹೇಳಿದಳು.

ನಾನು ಕೆಲಸ ಮಾಡುತ್ತಿದ್ದ ಊರಿಗೆ ಕರೆದುಕೊಂಡು ಹೋಗುತ್ತೇನೆ ಅಂದರೂ ಅವ್ವ ಬರುತ್ತಿರಲಿಲ್ಲ. 'ನೀನ ಬರಕೊಂತ ಇರು. ಇಲ್ಲೀ ಮನಿ, ದನಾ ಕರಾ ಎಲ್ಲಾ ಬಿಟ್ಟು ನಾ ಎಲ್ಲಿ ಹೋಗಲಿ, ಮಗನ' ಎಂದು ತಾನೇ ಕಟ್ಟಿಕೊಂಡ ಗೃಹಬಂಧನವನ್ನು ಸೂಚಿಸುತ್ತಿದ್ದಳು. ಮಧ್ಯಾಹ್ನದ ಊಟದ ನಂತರ ಸ್ವಲ್ಪ ಹೊತ್ತು ಅಟ್ಟದ ಮೇಲಿನ ಖೋಲಿಯಲ್ಲಿ ಮಲಗಿದೆ. ಅಪ್ಪ ಇದೇ ಖೋಲಿಯಲ್ಲಿ ಮಲಗುತ್ತಿದ್ದ. ಹೊರಸಿನ ಮೇಲೆ ಒರಗಿದೆ. ಮೇಲಿನ ಛತ್ತಿನಲ್ಲಿ ಜೋಡಿಸಿದ್ದ ಕರೇ ಹಂಚು, ಅಲ್ಲಲ್ಲಿ ಜೋತಾಡುತ್ತಿದ್ದ ಜಾಡಬುಡಗಳನ್ನು ನೋಡುತ್ತ ಏನೇನೋ ನೆನಪುಗಳು, ಹಳವಂಡಗಳು.

ಈ ಸಲ ಬಹಳ ಕಾಲದ ನಂತರ ಬಂದಿದ್ದೆ. ಊರಿನ ಹಿರಿಯರಿಗೂ, ಅಪ್ಪನ ಸರೀಕರಿಗೂ ಆನಂದವಾಗಿತ್ತು. ಎಲ್ಲರೂ ಗುರುತಿನವರೇ. ನಮ್ಮ ಮನೆಯ ಹೊರಕಟ್ಟೆಯ ಮೇಲೆ ಕುಳಿತು, ಎಲೆ ಅಡಿಕೆಯ ಚಂಚಿ ಬಿಚ್ಚುತ್ತ, ಅವರು ನಿರಂಬಳಾಗಿ ಮಾತಾಡುತ್ತಿದ್ದುದನ್ನು ನೋಡಿದೆ. ಯಾಕೋ, ಈಗ ಎಲ್ಲರಿಗೂ ವಯಸ್ಸಾಗಿದೆ ಅನಿಸಿತು. ಅವ್ವ ಅಲ್ಲಿ ಬಂದ ಎಲ್ಲರಿಗೂ ಆಗುವಂತೆ ದೊಡ್ಡ ತಾಬಂಡಿಯಲ್ಲಿ ಹಚ್ಚಿದ ಚುರಮರಿ ಕಾರದಾಣಿ ತಂದಿಟ್ಟಳು. ಮುಟಿಗೆ ತುಂಬ ಚುರಮರಿ ಎತ್ತಿಕೊಳ್ಳುತ್ತ, 'ಅವ್ವಾರಿಗೆ ಎಷ್ಟು ಖುಶಿ ಆಗೇತಿ ನೋಡ್ರೀ...' ಎಂದು ಚೇಷ್ಟೆ ಮಾಡಿದ ಶಂಬಯ್ಯ. ತಾಮ್ರದ ಚರಿಗೆ ತುಂಬ ಚಾ, ನಾಲ್ಕಾರು ವಾಟೆ ತಂದಿಟ್ಟ ಅವ್ವನ ಮುಖದ ತುಂಬ ಚಾದ ಬಿಸಿ ಉಸಿರೇ ಹಬೆಯಾಡುತ್ತಿತ್ತು. ಎಲ್ಲರೂ ಚಾ ಕುಡಿಯುತ್ತ, ತಮಗೆ ಗೊತ್ತಿಲ್ಲದ ನನ್ನ ಕೆಲಸದ ಬಗ್ಗೆ ಕೇಳುತ್ತ, ಆನಂದಿಸತೊಡಗಿದ್ದರು.

ಅದೇ ಹೊತ್ತಿಗೆ ಚನ್ನಪ್ಪನೂ ಬಂದ. 'ಯಾವಾಗ ಬಂದಿ ಶಿವಣ್ಣಾ?' ಎಂದು ಕೇಳುತ್ತ, ಸೀದಾ ಒಳಗೇ ಹೋದ. 'ಅವ್ವಾರ, ಇವತ್ತ ಮತ್ತ ಏನ ಕೆಲಸೈತರಿ?' ಎಂದ. 'ಮದಲ ಚಾ ಕುಡಿ, ಆ ಮ್ಯಾಲ ಹೇಳತೇನಿ' ಅಂದಳು ಅವ್ವ.

ನಾನಿಲ್ಲದಾಗ ಈ ಚನ್ನಪ್ಪನೇ ನಮ್ಮ ಮನೆಯ ಮಗನಾಗಿದ್ದಾನೆ, ಅವ್ವನ ಉಸಿರಾಗಿದ್ದಾನೆ ಎಂದು ಗೊತ್ತಿತ್ತು, ಈಗ ಕಣ್ಣಾರೆ ಕಂಡಂತಾಯಿತು. ಆತ್ಮೀಯ ಗೆಳೆಯ ಚನ್ನಪ್ಪ ಈಗ ಈ ಮನೆಯಲ್ಲಿ ನನ್ನ ಅಭಾವವನ್ನು ತುಂಬುತ್ತಿದ್ದಾನೆ, ಅವನನ್ನು ಮಾತಾಡಿಸಬೇಕು, ನನ್ನ ಆತ್ಮೀಯತೆಯನ್ನು, ಕೃತಜ್ಞತೆಯನ್ನು ವ್ಯಕ್ತಪಡಿಸಬೇಕು ಅನ್ನಿಸಿತು. ಅದು ಮಂದಿಯ ಈ ಗುಂಪಿನಲ್ಲಿ ಸಾಧ್ಯವಿರಲಿಲ್ಲ.

ಚನ್ನಪ್ಪ ಚಾ ಕುಡಿದ ನಂತರ ಅವ್ವನಿಗೆ ಹೇಳಿದೆ, 'ಅವ್ವಾ, ಚನ್ನಪ್ಪನ ಕೂಡ ಸೊಲ್ಪ ಹೊತ್ತು ಅಡ್ಡಾಡಿ ಬರತೇನಿ.' ಅವ್ವ ಕಳಕಳಿಯಿಂದ ಉತ್ತರಿಸಿದಳು, 'ಲಗೂನ ಬರ್ರಿ. ಇಬ್ಬರೂ ಕೂಡಿ ಇಲ್ಲೇ ಊಟಾ ಮಾಡೂವಂತರಿ.' ಚನ್ನಪ್ಪ ನನ್ನ ಕೂಡ ಇದ್ದರೆ ಒಂದು ಸೈನ್ಯ ಪಡೆಯೇ ಬೆಂಗಾವಲಿಗಿದ್ದಂತೆ ಎಂಬಂಥ ಸಮಾಧಾನ ಅವ್ವನಿಗೆ.

ಚನ್ನಪ್ಪ ಬಾಲ್ಯದಿಂದಲೂ ನನ್ನ ಗೆಳೆಯ. ಏಳನೇತ್ತದವರೆಗೆ ಈ ಊರಲ್ಲಿ ಇಬ್ಬರೂ ಕೂಡಿಯೇ ಕಲಿತಿದ್ದೆವು. ಆ ನಂತರ ಹೆಚ್ಚಿನ ಓದಿಗಾಗಿ ನಾನು ಪಟ್ಟಣಕ್ಕೆ ಹೋದೆ. ಬಡತನ ಚನ್ನಪ್ಪನಿಗೆ ಅಂಥ ಅವಕಾಶ ಕೊಡಲಿಲ್ಲ. ಅವನು ಊರಲ್ಲಿಯೇ ಉಳಿಯಬೇಕಾಯಿತು. ತನ್ನ ತಂದೆ ಕೋರು ತೆಗೆದುಕೊಂಡಿದ್ದ ಹೊಲದಲ್ಲಿ ದುಡಿಯುತ್ತಲೇ, ಬೇರೆಯವರ ಹೊಲಗಳಲ್ಲಿಯೂ ದುಡಿಯುತ್ತಿದ್ದ. ಹಾಗೆಯೇ ನಮ್ಮ ಎರಡು ಎಮ್ಮೆಗಳನ್ನೂ ತಮ್ಮ ದನಗಳ ಜೊತೆಗೇ ಹೊಡೆದುಕೊಂಡು ಹೋಗುತ್ತಿದ್ದ. ಬರಬರುತ್ತ ನಮ್ಮ ಅವ್ವನ ಬಹಳಷ್ಟು ಭಾರವನ್ನು ಕಡಿಮೆ ಮಾಡಿದ್ದ. ನಾನು ಆಗಾಗ ಬಂದು ಹೋಗುತ್ತಿದ್ದೆ. ಹೆಚ್ಚು ದಿನ ಇರಲು ಆಗುತ್ತಿರಲಿಲ್ಲ. ಹೆಚ್ಚಿನ ವಿದ್ಯಾಭ್ಯಾಸದ ನಂತರ ನೌಕರಿಯ ಹುಡುಕಾಟದ ಸಂದರ್ಭದಲ್ಲಿಯೂ ನನಗೆ ಮನೆಯ ಕಡೆಗೆ ಅಷ್ಟು ಕಾಳಜಿ ವಹಿಸಲು ಸಾಧ್ಯವಾಗಿರಲಿಲ್ಲ. ಬಹುಶಃ ಚನ್ನಪ್ಪನ ಮೇಲೆ ಇದ್ದ ವಿಶ್ವಾಸವೂ ಮುಂದೆ ಮುಂದೆ ಸಾಗಲು ನನಗೆ ಪ್ರೇರಣೆ ನೀಡಿತ್ತು ಅನಿಸುತ್ತದೆ. ನಾನು ಯಾವಾಗ ಬಂದರೂ ನಮ್ಮ ನಡುವೆ ಮೊದಲಿನಂಥದೇ ವಿಶ್ವಾಸವಿತ್ತು. ಈಚೆಗೆ ಒಳ್ಳೆಯ ನೌಕರಿ ಪಡೆದು, ಹತ್ತಿರವೇ ಇದ್ದರೂ, ನನ್ನ ಊರಿಂದ ಬಹುಪಾಲು ದೂರವೇ ಉಳಿದಿದ್ದೆ. ಆದರೂ ನಮ್ಮ ಗೆಳೆತನದಲ್ಲಿ ಮೊದಲಿನ ಅದೇ ಬಂಧವಿತ್ತು. ನಾನು ಪಟ್ಟಣದ ಬಗ್ಗೆ ಏನು ಹೇಳಿದರೂ ಚನ್ನಪ್ಪ ಅಷ್ಟು ಲಕ್ಷ್ಯ ಕೊಡುತ್ತಿರಲಿಲ್ಲ. ಅವನು ಮಾತ್ರ ತನ್ನ ಬದುಕು ಭಾವನೆಗಳ ಏನನ್ನೂ ಮುಚ್ಚಿಡುತ್ತಿದ್ದಿಲ್ಲ. 'ನಿನ್ನ ಮುಂದ ಹೇಳಿದರ, ಹನುಮಪ್ಪನ ಗುಡ್ಯಾಗ ದೇವರಿಗೆ ಹೂ ಪತ್ರಿ ಏರಿಸಿದಂಗ ಅನಸತೈತಿ, ಶಿವಣ್ಣಾ' ಅಂತಿದ್ದ. ನನ್ನ ಪಟ್ಟಣತನ, ಸ್ವಲ್ಪ ಹಣವಂತಿಕೆ ಯಾವುದೂ ನನಗೆ ರೋಗವಾಗಿ ಬಾಧಿಸಿರಲಿಲ್ಲ; ಚನ್ನಪ್ಪ ಬಡ ರೈತ, ಕೂಲಿಕಾರನಾಗಿದ್ದರೂ ನನ್ನ ಆತ್ಮೀಯ ಗೆಳೆಯನಾಗಿಯೇ ಉಳಿದಿದ್ದ. ಅವನು ನನ್ನಿಂದ ಏನೂ ಅಪೇಕ್ಷಿಸುತ್ತಿರಲಿಲ್ಲ. ಎಷ್ಟೋ ಸಲ ನಾನೇ ಅವನ ಮುಂದೆ ಸಣ್ಣವ ಎಂದೆನಿಸುತ್ತಿತ್ತು. ಹೀಗಾಗಿ ಊರಿಗೆ ಬಂದಾಗಲೆಲ್ಲ, ಇರುವ ಒಂದೆರಡು ದಿನ ಅವನನ್ನು ಕಾಣುವುದು, ಅವನೊಡನೆ ಮಾತಾಡುತ್ತ ಇಡೀ ಊರೇ ಆಗಿ ಬಿಡುವುದು ನನಗೆ ಸೇರುತ್ತಿತ್ತು. ಅವನ ನಿರ್ಲಿಪ್ತ ಕಣ್ಣುಗಳಲ್ಲಿ ನಮ್ಮ ಊರಿನ ಕಣಕಣ ಸೇರಿರುತ್ತಿತ್ತು. ಎಲ್ಲವನ್ನೂ, ಎಲ್ಲರನ್ನೂ ಹನುಮಪ್ಪನ ಪಾದಗಳಂತೆಯೇ ಕಾಣುತ್ತಿದ್ದ ಅವನ ಮಾತು, ಏನನ್ನೂ ಹನನ ಮಾಡದ ಸದಾ ಸಿದ್ಧ ಹನುಮಂತನ ಶಿಲಾಗದೆಯಂತೆಯೇ ಆಗಿರುತ್ತಿದ್ದುವು. ಯಾರು ಯಾವ ಊರಿನ ಕನ್ಯಾ ತಂದರು, ಈಗಲೂ ರೊಕ್ಕ ಹಚ್ಚಿ ಯಾರ ಮನೆಯಲ್ಲಿ ಯಾರು ಇಸ್ಪೀಟು ಆಡುತ್ತಾರೆ, ಯಾರು ಕಣದೊಳಗಿನ ಕಾಳು ಕದ್ದು ಸಿಕ್ಕುಬಿದ್ದರು, ಯಾವ ಸಾವಕಾರನ ಮಗ ಯಾರ ಮಗಳನ್ನ ಓಡಿಸಿಕೊಂಡು ಯಾವ ಊರಿಗೆ ಹೋದ, ಯಾರಿಗೆ ಅವಳಿಜವಳಿ ಮಕ್ಕಳಾದುವು, ಮುಪ್ಪಿನ ಅಪ್ಪ ಅವ್ವನ್ನ ಬಿಟ್ಟು ತಮ್ಮ ಹೊಸ ಹೆಂಡತಿಯ ಕೂಡ ಯಾರು ಊರ ಬಿಟ್ಟು ಹೆಂಡತಿಯ ಊರಿನ ಕಡೆ ಹೋದರು, ನಮ್ಮ ಊರಿನ ಯಾವ ಯಾವ ಹುಡುಗಿಯ ಲಗ್ನ ಆಯಿತು, ಯಾರ ಕೂಡ ಆಯಿತು, ಹೆಂಗ ಆಯಿತು, ಕುಸ್ತೀ ಕಣದಾಗ ನಮ್ಮ ಊರಿನ ಪೈಲವಾನರು ಎಷ್ಟು ಮಂದಿ ಇದ್ದರು, ಈ ಸರತೆ ಸನಾದಿ ಊದಾಕ, ಹಲಗಿ ಬಾರಸಾಕ ಯಾರು ಯಾರು ಬಂದಿದ್ದರು ಮುಂತಾದ ಅನೇಕ ವಿಷಯಗಳು ನಿರಾಳವಾಗಿ, ಮೂಕ ದೇವರಂತಿದ್ದ ಚನ್ನಪ್ಪನಿಂದಲೇ ತಿಳಿಯುತ್ತಿದ್ದುವು.

'ಸೊಲ್ಪ ಹೊರಗಡೆ ಹೋಗಿ ಅಡ್ಡಾಡಿ ಬರೂಣ?' ಅಂದೆ. 'ಹಂಗಿದ್ದರ ತಡಿ, ನಮ್ಮ ಮನಿಗೆ ಹೋಗಿ ಬರತೇನಿ. ನಾವು ಬರೂ ತನಕಾ ಮೂಕ ಜನಾವರ ಉಪಾಸ ಇರೂದು ಬ್ಯಾಡ. ಅವುಕ ಒಂದೀಟ ಮೇವು ಹಾಕಿ, ನೀರ ಕುಡಿಸಿ ಬರತೇನಿ' ಎಂದು ಚನ್ನಪ್ಪ ತನ್ನ ಮನೆಯ ಕಡೆ ಹೋದ.

ನಾನು ನಮ್ಮ ಹಿತ್ತಲದ ಕಡೆ ಹೋದೆ. ನೋಡತೊಡಗಿದೆ. ನಮ್ಮದು ದೊಡ್ಡ ಹಿತ್ತಲ. ದನದ ಹಕ್ಕೆ ಮೊದಲೂ ಈ ಕಡೆಗೇ ಇತ್ತು. ಅವ್ವ ಸೆಗಣಿ ಗುಂಪಿ ಮಾಡಿ ಇಟ್ಟು, ಇಲ್ಲಿಯೇ ಕುಳ್ಳು ಬಡಿಯುತ್ತಿದ್ದಳು. ಆ ಕಡೆ ಕುಳಬಾನ ಮಾಡಿದ್ದಳು. ಹಕ್ಕೆ, ಕುಳಬಾನ ಈಗಲೂ ಹಾಗೆಯೇ ಇವೆ. ಅವುಗಳ ಒಂದು ಬದಿಯಲ್ಲಿ ಹೊಸದಾಗಿ ಒಂದು ಚಪ್ಪರ ಮಾಡಿಸಿದ್ದಾರೆ. ಕೆಲಸಕ್ಕೆ ಬಾರದ, ರೈತಾಪಿ ಸಾಮಾನು ಅದರಲ್ಲಿ ಜೋಡಿಸಿ ಇಟ್ಟಿದ್ದಾರೆ. ನಮ್ಮ ದನಗಳನ್ನು ಈಗ ಹೊಲದಲ್ಲಿಯೇ ಕಟ್ಟುತ್ತಿದ್ದರು. ಆಚೆ ಮಠಪತಿಯವರ ಮನೆ ಕಡೆಯಲ್ಲಿ ಇದ್ದ ಹುಣಿಸೆ ಮರ ಮತ್ತು ಬೇವಿನ ಗಿಡ ನಾನು ಊರು ಬಿಟ್ಟು, ಕಲಿಯಲು ಹೋಗುತ್ತಿದ್ದಾಗ ಎಷ್ಟು ದೊಡ್ಡವಿದ್ದುವು! ಈಗಲೂ ಅವು ಆಗ ಇದ್ದಷ್ಟೇ ಇದ್ದಿರಬೇಕು. ನನಗೆ ಮಾತ್ರ ಸಣ್ಣವಾಗಿದ್ದಂತೆ ಕಾಣುತ್ತಿವೆ. ಬಹುಶಃ ನನ್ನ ಕಣ್ಣುಗಳೇ ಕೈ ಕೊಡುತ್ತಿವೆ. ಆಗ ಅವುಗಳ ಮೇಲೆ ಹತ್ತುವ ಕುತೂಹಲವಿತ್ತು, ಆದರೆ ಹೆದರಿಕೆ ಆಗುತ್ತಿತ್ತು. ಸಂಜೆಯಾದ ನಂತರ ಆ ಮರಗಳ ಕಡೆಗೆ ಹೋಗಬೇಡ ಎಂದು ಅವ್ವ ಯಾಕೆ ಹೇಳಿದ್ದಳೋ ಗೊತ್ತಿಲ್ಲ. ಆಗಿನಂತೆ ಈಗಲೂ ಬೇವಿನ ಮರದ ಕೆಳಗೆ ಹಳದಿ ಹಣ್ಣು ಚೆಂದಾಗಿ ಹರವಿದಂತೆ ಉದುರಿವೆ. ಹುಣಿಸೆಯ ಬಾಗಿದ ಟೊಂಗೆಯ ಎಲೆ ಹರಿದು ತಿನ್ನುವ ಸುಖವೇ ಸುಖ. ಈಗ? ಒಂದೆರಡು ಚಿಗುರೆಲೆ ಹರಿಯಲೆ... ಯೋಚಿಸುತ್ತಿದ್ದೆ. ಅಷ್ಟರಲ್ಲಿ ಚನ್ನಪ್ಪನ ದನಿ ಕೇಳಿಸಿತು, 'ಎಲ್ಲಿ ಅದೀ ಶಿವಣ್ಣಾ...?'

ಓಡುತ್ತ ಮುಂಬಾಗಿಲಿಗೆ ಬಂದೆ. ಚನ್ನಪ್ಪ ಈಗಷ್ಟೆ ಹೊಲದಿಂದ ಬಂದ ನನ್ನ ತಂಗಿಯ